ಶ್ರೀ ಎನ್.ಜಿ. ಹಾಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಆತಂಕ ಏನೆಂದು ನನಗೆ ಗೊತ್ತಿದೆ. They are eager. But the problem is whether the direction given by the predecessor amounts to an order; who has got to give directions. ನಮ್ಮಲ್ಲೂ ಭದ್ರಾ ಪ್ರಾಜೆಕ್ಟ್ ಇದೆ. ಎಲ್ಲಾ ಹಳ್ಳಿಗಳಿಗೂ ಒಳಚರಂಡಿ ಯೋಜನೆಗೆ ಪ್ರಾವಿಷನ್ ಮಾಡಿಲ್ಲ. ನಾವು ಹೇಳುವುದನ್ನು ಕೇಳಿ These matters will have to be placed before the Board of Chief Engineers. Let us see what is their opinion.

12.10 ಪಿ.ಎಂ

ಶ್ರೀ ಎಸ್.ಹೆಚ್. ಕೌಜಲಗಿ : ಬೋರ್ಡ್ ಆಫ್ ಚೀಫ್ ಎಂಜಿನಿಯರ್ಸ್ ಮುಂದೆ ಎಂದು ಹೇಳುತ್ತಾರೆ. The matter is pending since one year. What is the use? ಇವತ್ತಿನ ದಿವಸ ಸೋರಿಕೆ ಇದೆ. ಆಕ್ಷನ್ ತೆಗೆದುಕೊಳ್ಳದೇ ಇದ್ದರೆ ಏನು ಮಾಡುವುದು?

(ಗೊಂದಲ)

ಶ್ರೀ ಸಿ. ಬೈರೇಗೌಡ : ಸರ್ಕಾರ ಹೇಳುವುದು ಒಂದು. ಮಾಡುವುದು ಒಂದು. ಬಹಳ ತೀವ್ರವಾದ ವಿಚಾರ ಇದೆ. ದಯವಿಟ್ಟು ಅವರು ಮಾತನಾಡಲು ಅವಕಾಶ ಕೊಡಿ.

ಶ್ರೀ ಎಸ್.ಹೆಚ್. ಕೌಜಲಗಿ : ಈ ಪ್ರಶ್ನೆಗೆ ಮಹತ್ವ ಇದೆ. ಆದ್ದರಿಂದ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಆ ಬಗ್ಗೆ ಒಪ್ಪಿದ್ದಾರೆ. ಅದಕ್ಕೆ ಅವಕಾಶ ಮಾಡಿಕೊಡುತ್ತೇವೆ.

ಗೋಕಾಕ್ ವರದಿಯ ಅನುಷ್ಠಾನ

1 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಆಡಳಿತ ಭಾಷೆಯ ಬಗ್ಗೆ ಸರ್ಕಾರದವರು ಕೈಗೊಂಡಿರುವ ಯೋಜನೆಗಳೇನು?

ಆ) ಗೋಕಾಕ್ ವರದಿಯನ್ನು ಜಾರಿಗೆ ತರಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಗಡಿನಾಡ ಪ್ರದೇಶಗಳಲ್ಲಿ ಕನ್ನಡ ಬೆಳವಣಿಗೆಯ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) 1) ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಸರ್ಕಾರ ರಚಿಸಿದೆ.

2) ಏಪ್ರಿಲ್ 93ರಿಂದ ಮಾರ್ಚ್ 94ರವರೆಗಿನ ವರ್ಷವನ್ನು ಕನ್ನಡ ಜಾಗೃತಿ ವರ್ಷ ಎಂದು ಆಚರಿಸಲಾಗುತ್ತಿದೆ.

3) ಆಡಳಿತ ಪೂರಕ ಸಾಹಿತ್ಯದ ತಯಾರಿಕೆ ಪ್ರಕಟಣೆ, ಸರಬರಾಜು ಕಾರ್ಯವನ್ನು ಮುಂದುವರಿಸಿದೆ.

4) ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನು ಹಿಂದಕ್ಕೆ ಪಡೆದು ಬದಲಿಗೆ ಕನ್ನಡ ಬೆರಳಚ್ಚು ಯಂತ್ರಗಳನ್ನು ನೀಡುವ ಕಾರ್ಯ ಮುಂದುವರಿದಿದೆ.

5) ತನಿಖಾ ತಂಡಗಳನ್ನು ಪ್ರತಿ ಇಲಾಖೆಯಲ್ಲಿ ರಚಿಸಲಾಗಿದೆ.

6) ಕನ್ನಡ ತರಬೇತಿ ಕಾರ್ಯಕ್ರಮಗಳನ್ನು ಹೆಚ್ಚಿಸಲಾಗಿದೆ.

7) ಕನ್ನಡ ಅಭಿವೃದ್ಧಿ ವಿಷಯಗಳನ್ನು ನೋಡಿಕೊಳ್ಳಲು ಸಚಿವಾಲಯ ಮಟ್ಟದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೆಂಬ ಹೊಸ ಇಲಾಖೆಯನ್ನು ಸೃಜಿಸಲಾಗಿದೆ.

8) ಕನ್ನಡ ಬಳಕೆ ಪ್ರಗತಿಯನ್ನು ಸಚಿವಾಲಯ ಇಲಾಖೆಗಳಲ್ಲಿ ಹಾಗೂ ರಾಜ್ಯದ ಇತರ ಕಛೇರಿಗಳಲ್ಲಿ ಸಮೀಕ್ಷಿಸಲಾಗುತ್ತಿದೆ.

9) ಕನ್ನಡ ಬಳಕೆ ಬಗ್ಗೆ ಜಾಗೃತಿ ಮೂಡಿಸಲು ಪ್ರಚಾರ, ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.

ಆ) ಗೋಕಾಕ್ ವರದಿಯ ಶಿಫಾರಸ್ಸುಗಳನ್ನು ಆಧರಿಸಿ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯ ಭಾಷೆಯನ್ನಾಗಿ ಕಲಿಯಲು ನಿಗದಿಪಡಿಸಿದ್ದ ದಿನಾಂಕ 20.7.-82ರ ಸರ್ಕಾರಿ ಆದೇಶವನ್ನು ರಾಜ್ಯ ಉಚ್ಚನ್ಯಾಯಾಲಯವು ಸಂವಿಧಾನದ ಕೆಲವು ವಿಧಿಗಳ ಉಲ್ಲಂಘನೆಯಾಗಿದೆ ಎಂಬ ಕಾರಣಕ್ಕಾಗಿ ಅನೂರ್ಜಿತಗೊಳಿಸಿತು. ನ್ಯಾಯಾಲಯದ ಈ ತೀರ್ಪಿನ ಸಲಹೆ ಸೂಚನೆಗಳನ್ವಯ ಸರ್ಕಾರವು ಪರಿಷ್ಕೃತ ಭಾಷಾ ನೀತಿಯನ್ನು ದಿನಾಂಕ 19.6.89ರ ಆದೇಶದಲ್ಲಿ ಪ್ರಕಟಿಸಿತು. ಈ ಆದೇಶವನ್ನು ಸರ್ವೋಚ್ಚ ನ್ಯಾಯಾಲಯವು ದಿನಾಂಕ 8.12.93ರ ತೀರ್ಪಿನಲ್ಲಿ ಎತ್ತಿಹಿಡಿದಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಸರ್ಕಾರದ ಈ ಭಾಷಾ ನೀತಿಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಕನ್ನಡ ಕಾರ್ಯಕ್ರಮಗಳನ್ನು ಹೆಚ್ಚಾಗಿ ನಡೆಸಲು ಪ್ರಯತ್ನಿಸಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ನನ್ನ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ. ಎಷ್ಟು ಜನ ಕನ್ನಡ ಬಾರದ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳು ಸರ್ಕಾರದಲ್ಲಿ ಇದ್ದಾರೆ? ಎಷ್ಟು ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನು ತಾವು ವಾಪಸ್ ಕಳುಹಿಸಿ ಕನ್ನಡ ಬೆರಳಚ್ಚು ಯಂತ್ರಗಳನ್ನು ಪಡೆದಿದ್ದೀರಿ. ಗೋಕಾಕ್ ವರದಿಯ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯದಿಂದ ಬಂದ ತೀರ್ಪು ಏನು? ಆ ತೀರ್ಪನ್ನು ಯಥಾವತ್ತಾಗಿ ಜಾರಿಗೆತರಬೇಕೆಂದು ತಮ್ಮ ಸರ್ಕಾರ ತೀರ್ಮಾನ ಮಾಡಿದೆಯೇ? ಗಡಿನಾಡು ಪ್ರದೇಶಗಳಲ್ಲಿ ಕನ್ನಡ ಬೆಳವಣಿಗೆ ಬಗ್ಗೆ ಪ್ರಯತ್ನ ಪಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಏನು ಪ್ರಯತ್ನ ಪಟ್ಟಿದ್ದೀರಿ?ಯಾವ ರೀತಿ ಬೆಳವಣಿಗೆ ಮಾಡತಕ್ಕ ನೀತಿ ತಮ್ಮಲ್ಲಿ ಇದೆ? ನಿಪ್ಪಾಣಿಯಲ್ಲಿ ಇವತ್ತೂ ಸಹಿತ ಮರಾಠಿಯಲ್ಲಿ ಆಡಳಿತ ನಡೆಯುತ್ತಿದೆ. ಬೆಳಗಾವಿಯ ಅನೇಕ ಕಾರ್ಯಾಲಯದಲ್ಲಿ ಮರಾಠಿ ಮತ್ತು ಇಂಗ್ಲೀಷ್ ನಲ್ಲಿ ಆಡಳಿತ ನಡೆಯುತ್ತಿದೆ. ಕನ್ನಡದಲ್ಲಿ ಇಲ್ಲ. ಈ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಹೆಚ್ ವಿಶ್ವನಾಥ್ : ಮಾನ್ಯ ಅಧ್ಯಕ್ಷರೇ, ಎಷ್ಟು ಜನ ಐಎಎಸ್ ಅಧಿಕಾರಿಗಳಿಗೆ ಕನ್ನಡ ಬರುವುದಿಲ್ಲವೆನ್ನತಕ್ಕ ಲೆಕ್ಕ ಕೇಳಿದ್ದಾರೆ. ನಮ್ಮ ದಾಖಲಾತಿ ಪ್ರಕಾರ ಎಲ್ಲರಿಗೂ ಕೂಡ ಬರುತ್ತದೆ. ಎಲ್ಲರೂ ಕೂಡ ಕನ್ನಡ ಭಾಷೆ ಪಾಸ್ ಆಗಿದ್ದಾರಂದು ದಾಖಲೆ ನಮ್ಮ ಹತ್ತಿರ ಇದೆ. ಮತ್ತೆ ಈಗಾಗಲೇ ತಮಗೆ ಗೊತ್ತಿರುವ ಹಾಗೆ ಕನ್ನಡ ಜಾಗೃತಿ ವರ್ಷ ಪ್ರಾರಂಭ ಆದಮೇಲೆ ಹಲವಾರು ಜನ ಐಎಎಸ್ ಅಧಿಕಾರಿಗಳು ಕನ್ನಡದಲ್ಲಿ ತಮ್ಮ ಆಡಳಿತ ನಡೆಸುವುದಕ್ಕೆ ಪ್ರಯತ್ನವನ್ನು ಹೆಚ್ಚಿನ ರೀತಿಯಲ್ಲಿ ಪಡುತ್ತಿದ್ದಾರೆ. ಕನ್ನಡದಲ್ಲಿ ಸಹಿ ಕೂಡ ಮಾಡುವುದಕ್ಕೆ ಪ್ರಯತ್ನ ಆಗಿದೆ. ಮತ್ತು ಬೆರಳಚ್ಚು ವಿಚಾರದಲ್ಲಿ ವಿಶೇಷವಾಗಿ 500 ಬೆರಳಚ್ಚು ಯಂತ್ರಗಳನ್ನು ಈಗ

ಕೊಂಡುಕೊಳ್ಳಬೇಕೆನ್ನುವ ವಿಚಾರದಲ್ಲಿ ಈಗಾಗಲೇ ಹಲವು ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನು ವಾಪಸ್ಸು ಪಡೆದು ಕನ್ನಡ ಯಂತ್ರ ಕೊಡುತ್ತಿದ್ದೇವೆ. ಒಂದು ಕಡೆ ೧೦ ಇಂಗ್ಲೀಷ್ ಯಂತ್ರಗಳು ಇರುತ್ತವೆ. ಅಲ್ಲಿ ಐದನ್ನಾದರೂ ಕೂಡ ನಾವು ವಾಪಸ್ಸು ತೆಗೆದುಕೊಂಡು ಐದು ಕನ್ನಡ ಬೆರಳಚ್ಚು ಯಂತ್ರಗಳನ್ನು ಇಡತಕ್ಕ ಕಾರ್ಯಕ್ರಮ ಆಗುತ್ತಿದೆ. ಮತ್ತು ಸರ್ವೋಚ್ಚ ನ್ಯಾಯಾಲಯದ ಬಗ್ಗೆ, ಭಾಷಾ ನೀತಿಯ ಬಗ್ಗೆ ಏನು ಎಂದು ಕೇಳಿದ್ದೀರಿ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇರುವುದರಿಂದ ಅದಕ್ಕೆ ಅವರು ಮಧ್ಯ ಪ್ರವೇಶ ಮಾಡಿ ಅದಕ್ಕೆ ಉತ್ತರವನ್ನು ಕೊಡುತ್ತಾರೆ. ಗಡಿ ನಾಡು ವಿಚಾರದಲ್ಲಿ, ಗಡಿನಾಡು ಕನ್ನಡಿಗರಲ್ಲಿ ಭಾಷೆ ಬಗ್ಗೆ ಅಭಿಮಾನ ಮೂಡಿಸತಕ್ಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮತ್ತು ಕಲಿಕಾ ಕೇಂದ್ರಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ತಮ್ಮ ಕ್ಷೇತ್ರ ಕೂಡ ಗಡಿ ನಾಡಿನಲ್ಲಿ ಬರುವುದಿಮ್ದ ತಾವೂ ಕೂಡ ಅದರ ಸದಸ್ಯರು ಇದ್ದೀರಿ. ತಮ್ಮ ಕ್ಷೇತ್ರ ಕೂಡ ಅಲ್ಲಿ ಬರುತ್ತದೆ. ಗಡಿ ನಾಡು ಅಭಿವೃದ್ಧಿ ಎಂದರೆ ಗಡಿ ನಾಡಿನಲ್ಲಿ ಅವರಿಗೆ ಬೇಕಾದ ಶಾಲೆಗಳಾಗಲೀ,ಇನ್ನಿತರ ಸೌಲಭ್ಯಗಳನ್ನಾಗಲೀ ಕೊಡತಕ್ಕರೀತಿಯಲ್ಲಿ ಗಡಿನಾಡು ಅಭಿವೃದ್ಧಿ ಮಂಡಲಿ ಯೋಜನೆ ಮಾಡಬೇಕಾಗುತ್ತದೆ.ಇವತ್ತು ಗಡಿನಾಡಿನಲ್ಲಿ ಬರತಕ್ಕ ಶಾಸಕರಿಗೆ ಪರಮೋಚ್ಚ ಅಧಿಕಾರ ಇರುತ್ತದೆ. ಯಾವ ರೀತಿಯ ಕಾರ್ಯಕ್ರಮಗಳನ್ನು ಇಲ್ಲಿ ರೂಪಿಸಬೇಕೆಂದು ತಮ್ಮ ವ್ಯಾಪ್ತಿಗೇ ಬರುತ್ತದೆ. ತಾವು ಕಾರ್ಯಕ್ರಮ ರೂಪಿಸುವಾಗ ಶಿಕ್ಷಣಕ್ಕೆ ಒತ್ತು ಕೊಡತಕ್ಕದ್ದು, ಕನ್ನಡತನದ ಬಗ್ಗೆ ಅಭಿಮಾನ ಬೆಳೆಸತಕ್ಕ ವಿಚಾರದಲ್ಲಿ ಕಾರ್ಯಕ್ರಮಗಳನ್ನು, ಗಡಿ ನಾಡ ಅಭಿವೃದ್ಧಿಗೆ ಬರತಕ್ಕ ಹಣದಲ್ಲಿ ತಾವೂ ಕೂಡಾ ರೂಪಿಸಿಕೊಳ್ಳಬೇಕಾಗುತ್ತದೆ. ಬೆಳಗಾವಿ ಭಾಗದ ನಿಪ್ಪಾಣಿ ಗಡಿ ಪ್ರದೇಶದಲ್ಲಿನ ವಿಚಾರ ತಾವು ಹೇಳಿದ ಮಾತು ನಿಜ. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೂ ನಾವು ಕೆಲವು ಬದಲಾವಣೆಗಳನ್ನು ತಂದದ್ದೇವೆ. ದುಬಾಷಿಗಳನ್ನು ಇಟ್ಟು ತರ್ಜುಮೆ ನಡೆಯತಕ್ಕ ಕಾರ್ಯ ನಡೆಯುತ್ತಿದ್ದು, ದುಬಾಷಿಗಳನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದೇವೆ. ಅಲ್ಲಿ ಕನ್ನಡದಲ್ಲಿ ಕೂಡ ಕಡ್ಡಾಯವಾಗಿ ಆಗಬೇಕು. ಹಿಂದೆ ತರ್ಜುಮೆ ಮಾಡುವವರು ಇದ್ದರು. ಕನ್ನಡವೇ ಸಂಪೂರ್ಣ ಆಗಬೇಕೆಂದು ಹೇಳಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರಿಗೆ ಕನ್ನಡದ ಬಗ್ಗೆ ಕಳಕಳಿ ಇದೆ. ಕನ್ನಡ ಜಾಗೃತಿ ವರ್ಷ ಎಂದು ಕನ್ನಡ ಸಂಸ್ಕೃತಿ ಸಚಿವರ ಮತ್ತು ಮುಖ್ಯ ಮಂತ್ರಿಗಳ ಫೋಟೋವನ್ನು ಇಡೀ ನಾಡಿಗೆ ಪ್ರದರ್ಶನ ಮಾಡಿದ್ದೀರಿ. ಆ ಬಗ್ಗೆ ಪರವಾಗಿಲ್ಲ, ತಾವು ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಿಗೆ ಕನ್ನಡ ಬರುತ್ತದೆಂದು ದಾಖಲೆ ಇದೆ ಎಂದು ಹೇಳುತ್ತಿದ್ದೀರಿ. ಯಾವುದಾದರೂ ವ್ಯವಹಾರದಲ್ಲಿ ನೂರಕ್ಕೆ 50 ಜನ ಕನ್ನಡ ಬಲ್ಲ ಅಧಿಕಾರಿಗಳು ತಮ್ಮ ಎಲ್ಲಾ ಟಿಪ್ಪಣಿಗಳನ್ನು ಇಂಗ್ಲೀಷಿನಲ್ಲಿ ಬರೆದ ಉದಾಹರಣೆಯನ್ನು ನಾನು ಕೊಡಬಲ್ಲೆ. ಅದು ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಸಭೆಯಲ್ಲಿ ಇರಬಹುದು. ತಾವು ತಮ್ಮ ಆತ್ಮಸಾಕ್ಷಿಗೆ ಅನುಸಾರವಾಗಿ ಉತ್ತರವನ್ನು ಕೊಡಿ. ಕನ್ನಡವನ್ನು ಎಲ್ಲಾ ಹಂತಗಳಲ್ಲಿ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಪಡಿ.

ಶ್ರೀ ಕೆ.ಹೆಚ್. ರಂಗನಾಥ್ : ಎಲ್ಲರೂ ಕನ್ನಡದಲ್ಲಿ ಬರೆಯುತ್ತೇವೆ.ಮಂತ್ರಿಗಳಿಂದ ಹಿಡಿದು ಎಲ್ಲರೂ ಕನ್ನಡದಲ್ಲೇ ಬರೆಯುತ್ತೇವೆ. ಯಾರೋ ಮುಸಲ್ಮಾನರು ಬರೆಯದೇ ಇರಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಜವಾಬ್ದಾರಿಯಿಂದಲೇ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಹೇಳುತ್ತಿರುವುದು ದೂರವಾದ ಸಂಗತಿ. ನೂರಕ್ಕೆ 50 ಫೈಲ್ಗಳು.

ಶ್ರೀ ಕೆ.ಹೆಚ್. ರಂಗನಾಥ್ : ಅಧ್ಯಕ್ಷರ ಕಛೇರಿಯಲ್ಲಿ ಕನ್ನಡದಲ್ಲೇ ಬರೆಯುತ್ತಾರೆ. ನಮ್ಮ ಕಛೇರಿಯಲ್ಲಿ, ಮುಖ್ಯಮಂತ್ರಿಗಳ ಕಛೇರಿಯಲ್ಲಿ, ಉಪಮುಖ್ಯಮಂತ್ರಿಯವರ

ಕಛೇರಿಯಲ್ಲಿ ಕನ್ನಡಲ್ಲೇ ಬರೆಯಲಾಗುತ್ತಿದೆ. ಕ್ಯಾಬಿನೆಟ್ ನೋಟ್ ಕೂಡ ಕನ್ನಡದಲ್ಲೇ ಬರುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಬಗ್ಗೆ ಆರೋಪ ಇಲ್ಲ. ಐಎಎಸ್, ಐಪಿಎಸ್ ಅಧಿಕಾರಿಗಳು ಯಾರು ಕನ್ನಡ ಬಾರದಿರುವವರು ಇದ್ದಾರೆ ಅವರಿಗೆ ಹೇಳಬೇಕು. ಯಾರಿಗೆ ಕನ್ನಡ ಬರುತ್ತದೆಯೋ ಅವರೂ ಕೂಡ ಕನ್ನಡ ಬಳಕೆ ಮಾಡುತ್ತಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನೋಡಬೇಕು.

ಶ್ರೀ ಕೆ.ಹೆಚ್.ರಂಗನಾಥ್ : ವಾದಕ್ಕೆ ಮಾತನಾಡುವುದು ಅಲ್ಲ. ಮಾನ್ಯ ಯಡಿಯೂರಪ್ಪನವರು ಬಿಜೆಪಿ ಪಕ್ಷದ ಜನರಲ್ ಸೆಕ್ರೆಟರಿಯಾಗಿ ದೆಹಲಿಗೆ ಹೋಗಿದ್ದಾರೆ. ಅವರು ಹಿಂದಿಯನ್ನು ಕಲಿತು, ಹಿಂದಿಯಲ್ಲಿ ಬರೆದು, ಹಿಂದಿಯಲ್ಲಿ ಭಾಷಣ ಮಾಡುವುದಕ್ಕೆ ಆಗುತ್ತದೆಯೇ? ಹಾಗೆ ಇವರಿಗೂ ಸ್ವಲ್ಪ ತೊಂದರೆ ಇರಬಹುದು. ಅದು ಬಿಟ್ಟು ಇದನ್ನೇ ಪ್ರಚಾರ ಮಾಡುತ್ತಾ ಹೋದರೆ ಏನಪ್ಪ ನಾವು ಕಷ್ಟಪಟ್ಟು ಮಾಡಿದರೂ ಕೂಡ ನಮ್ಮನ್ನೇ ಅನ್ನುತ್ತಾರೆ ಎನ್ನುವಂತೆ ಆಗಬಾರದು .ಎತ್ತುಗಳಿಗೆ ಜಾಸ್ತಿ ಹೊಡೆಯ ಬಾರದು. ಹಾಗೆ ಮಾಡಿದರೆ ಮೊಂಡು ಬೀಳುತ್ತವೆ.

ಶ್ರೀ ವಾಟಾಳ್ ನಾಗರಾಜ್ : ತಾವು ಏಕೆ ಬದಲಾವಣೆ ಆಗುತ್ತಿದ್ದೀರೋ ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕನ್ನಡವನ್ನೂ ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವುದಕ್ಕೆ ಆಗಿಲ್ಲ ಎನ್ನುವುದು ಮಾನ್ಯ ಸಚಿವರ ಉತ್ತರಿಂದ ಸ್ಪಷ್ಟವಾಗುತ್ತದೆ. ಇಂಗ್ಲೀಷಿನಲ್ಲಿ ಬರೆಯುತ್ತಿರುವುದನ್ನು ಅನುಸರಿಸಿಕೊಂಡು ಹೋಗಿ ಎಂದು ಹೇಳುತ್ತಿದ್ದೀರಿ. ಡೆಲ್ಲಿಯ ಬಗ್ಗೆ ಮಾತನಾಡಬೇಡಿ. ಕನ್ನಡ ನಾಡಿನಲ್ಲಿ ಇರುವವರಿಗೆ ಕನ್ನಡ ಕಡ್ಡಾಯ ಮಾಡಬೇಕು. ಕನ್ನಡ ಜಾಗೃತಿ ವರ್ಷದಲ್ಲಿ ಕಾರ್ಯರೂಪಕ್ಕೆ ತರದೇ ಕನ್ನಡ ನಾಡಿನ ಜನರ ಕಣ್ಣಿಗೆ ಮಣ್ಣು ಎರಚುವ ಘೋಷಣೆಗಳು ಏಕೆ? ತಮಗೆ ನಿಜವಾದ ಕಳಕಳಿ ಇದ್ದರೆ ಸೂಚನೆ ಕೊಡಿ. ಯಾರಿಗೆ ಕನ್ನಡದಲ್ಲಿ ಓದುವುದಕ್ಕೆ, ಬರೆಯುವುದಕ್ಕೆ ಬರುತ್ತದೆಯೇ ಅವರಿಗೆ ಆದೇಶ ಕೊಡುತ್ತೀರಾ? ಈ ಕೆಲಸವನ್ನು ತಾವು ಮಾಡಿ.

ಶ್ರೀ ಎಂ.ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ನಾವು ಹೇಳುತ್ತಾ ಬಂದಿದ್ದೇವೆ. ಐಎಎಸ್ ಅಧಿಕಾರಿಗಳು ಕನ್ನಡಕ್ಕೆ ವಿರೋಧ, ವಿರೋಧ, ವಿರೋಧ ಎಂದು ಹೇಳಿ, ಹೇಳಿ ಸನ್ಯಾಸ್ಯ ರಂಗನಾಥ್ ಅವರು ಹೇಳಿದ ಪ್ರಕಾರ ಒಂದು ನಮಗೆ ಏನು ಆಗಿದೆ ಎಂದರೆ ನಾವು ಹೇಳುತ್ತಾ ಬಂದಿದ್ದೇವೆ. ಆದರೆ ವಿತನ್ಮಧ್ಯೆ, ಬದಲಾವಣೆ ಆಗಿರುವುದನ್ನು ನಾವು ಗುರುತಿಸಿಲ್ಲ. ನನ್ನ ಅನುಭವದ ಪ್ರಕಾರ ನಮಗೆ ಕನ್ನಡದಲ್ಲಿಯೇ ಟಿಪ್ಪಣಿ ಕಡತದಲ್ಲಿ ಬರುತ್ತಿವೆ. ಇದನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಕನ್ನಡದಲ್ಲಿ ಟಿಪ್ಪಣಿ ಬರೆಯದೇ ಇದ್ದರೆ ಅಂತಹ ಟಿಪ್ಪಣಿಯನ್ನು ನೋಡುವುದಿಲ್ಲವೆಂದು ಹೇಳಿ ಹಿಂದಕ್ಕೆ ಕಳುಹಿಸಿದ್ದೇನೆ. ನಮ್ಮ ಮುಖ್ಯಕಾರ್ಯದರ್ಶಿಯವರು ಅನೇಕ ವರ್ಷ ದೆಹಲಿಯಲ್ಲಿ ಇದ್ದವರು. ಅವರಿಂದ ಯಾವುದೇ ಒಂದು ಕಡತ ಬರುವುದಿದ್ದರೆ ಅದರಲ್ಲಿ ಕನ್ನಡದಲ್ಲೇ ಟಿಪ್ಪಣಿ ಇರುತ್ತದೆ. ಸ್ವಲ್ಪ ಓದಲಿಕ್ಕೆ ಕಷ್ಟವಾಗುತ್ತದೆ. ಆದರೂ ಕೂಡ ಅದು ಅರ್ಥವಾಗುತ್ತದೆ. ಅವರು ಬಹಳ ಶ್ರಮಪಟ್ಟು ಬಹಳ ಚೆನ್ನಾಗಿ ಟಿಪ್ಪಣಿಯನ್ನು ಬರೆಯುತ್ತಿದ್ದಾರೆ. ಅದು ಬರೀ ಕಣ್ಣಿನಿಂದ ನೋಡುವುದಕ್ಕೆ ಆಗುವುದಿಲ್ಲ. ಒಳ್ಳೆಯ ಕನ್ನಡಕವನ್ನು ಇಟ್ಟುಕೊಂಡರೆ ನೋಡುವುದಕ್ಕೆ ಆಗುತ್ತದೆ. ಅಷ್ಟು ಶ್ರಮವನ್ನು ಅವರು ಪಡುತ್ತಿದ್ದಾರೆ. ಒಬ್ಬರು ಹೆಚ್ಚುವರಿ ಮುಖ್ಯಕಾರ್ಯದರ್ಶಿಗಳಾದ ಸನ್ಯಾಸ್ಯ ಗೋಶಾಲ್ ಅವರು ಇದ್ದಾರೆ. ಅವರಿಗೆ ನಾವೇ ಎಷ್ಟೋ ಸಲ ಹೇಳಿದ್ದೇವೆ ನೀವು ಇಂಗ್ಲೀಷಿನಲ್ಲೇ ಮಾತನಾಡಬೇಡಿ ಎಂದು. ಅಂದರೆ ಕನ್ನಡದಲ್ಲೇ ಅವರು ಮಾತನಾಡುತ್ತಾರೆ. ನಾವು ಸ್ವಲ್ಪ ಇಂಗ್ಲೀಷಿನಲ್ಲೇ ಅಪ್ಪಿತಪ್ಪಿ ಮಾತನಾಡುವುದಕ್ಕೆ ಪ್ರಯತ್ನ ಪಟ್ಟರೂ ಕೂಡ ಅವರು ಕನ್ನಡದಲ್ಲೇ ಮಾತನಾಡುತ್ತಾರೆ. ನಾನಂತೂ ಬಹಳವಾಗಿ ಕಂಡಿದ್ದೇನೆ,ಅದರ ಅನುಭವ ನಮಗೆ ಎಲ್ಲಾ ಆಗಿದೆ. ಹೌದು, ಇನ್ನೂ ಪರಿಪೂರ್ಣವಾಗಿ ಆಗಬೇಕು.

ಇನ್ನೂ ಒಳ್ಳೆಯ ಕನ್ನಡ ಬರೆಯಬೇಕೆಂದು ಇದೆ. ಚಳುವಳಿ ಇರುವುದು ಎಂದರೆ ಒಳ್ಳೆಯ ಕನ್ನಡ ಬರೆಯಬೇಕು ಅಂತ. ಅದನ್ನು ಸ್ವಲ್ಪ ಪ್ರಯತ್ನ ಮಾಡೋಣ. ಶ್ರೀ ವಾಟಾಳ್ ನಾಗರಾಜ್ ಅವರು ಅಪೇಕ್ಷೆ ಪಡುವುದು ಎಂದರೆ ಕನ್ನಡದಲ್ಲೇ ಬರೆಯಬೇಕು ಅಂತಹೇಳಿ. ಒಳ್ಳೆಯ ಅಚ್ಚಕನ್ನಡದಲ್ಲಿ, ಅದೂ ಮೈಸೂರು ಮಲ್ಲಿಗೆ ಕನ್ನಡದಲ್ಲಿ ಬರೆಯಬೇಕು ಎಂದು ಹೇಳಿದರೆ, ಅದು ಸ್ವಲ್ಪ ಎಲ್ಲರಿಗೂ ಕಷ್ಟವಾಗಬಹುದು. ಆದರೆ ಇವತ್ತು ಬಹಳ ಬದಲಾವಣೆಯಾಗಿದೆ.ಎಲ್ಲೆಲ್ಲಿ ಕೆಲಸ ಮಾಡಿದ್ದಾರೆ, ಅಂತಹ ಕಡೆ ಮಾನ್ಯತೆ ಕೊಡಬೇಕು. ಎಲ್ಲಿ ಆಗಿಲ್ಲವೆಂದು ಹೇಳುತ್ತೀರಿ, ಅದನ್ನು ಸರಿ ಪಡಿಸೋಣ. ಅದರೆ ಬಹಳ ಬೆಳವಣಿಗೆಯಾಗಿದೆ. ಈ ಕನ್ನಡದ ಜಾಗೃತ ವರ್ಷದಲ್ಲಿ ಬಹಳ ಬದಲಾವಣೆಯಾಗಿದೆ. ಇನ್ನು, ಉಚ್ಚನ್ಯಾಯಾಲಯ ವಿಚಾರ ಕೇಳಿದ್ದೀರರಿ. ಆ ತೀರ್ಪನ್ನು ನಾವು ಇಲ್ಲಿ ಸಂಪೂರ್ಣವಾಗಿ ಅನುಷ್ಠಾನಕ್ಕೆ ತರುತ್ತೇವೆ. ಎಲ್ಲೆಲ್ಲಿ ಯಾವ್ಯಾವ ರೀತಿಯಲ್ಲಿ ಸುತ್ತೋಲೆ ಕೊಡಬೇಕೆಂದು ಹೇಳಿ ಈಗಾಗಲೇ ಕಾನೂನು ಇಲಾಖೆ, ಕನ್ನಡ ಸಂಸ್ಕೃತಿ ಇಲಾಖೆ ಮತ್ತು ನಮ್ಮ ಆಡಳಿತ ಇಲಾಖೆಯಿಂದೆಲ್ಲಾ ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ. ತತ್‌ಕ್ಷಣ ನಾವು ಈ ಬಗ್ಗೆ ಬೇಕಾದಂಥ ಒಂದು ಮರು ಸುತ್ತೋಲೆಯನ್ನು ಕಳಿಸುತ್ತೇವೆ.

ಶ್ರೀ ಸಿ.ಬೈರೇಗೌಡ : ಮುಖ್ಯಮಂತ್ರಿಗಳೇ, ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಉಚ್ಚನ್ಯಾಯಾಲದ ತೀರ್ಪು ಇರತಕ್ಕಂಥಾದ್ದು.

ಅಧ್ಯಕ್ಷರು : ಅವರು ಉಪಪ್ರಶ್ನೆ ಕೇಳಲಿ. ನೀವು ಪ್ರಶ್ನೆ ಕೇಳುವುದಲ್ಲ.

ಶ್ರೀ ಸಿ.ಬೈರೇಗೌಡ : ಇದರ ಬಗ್ಗೆ ಸರ್ಕಾರದ ನಿಲುವು ಏನು? ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಹಾಗೆ ಉಚ್ಚನ್ಯಾಯಾಲಯದ ತೀರ್ಪು ಇರತಕ್ಕಂಥಾದ್ದು. ವಿದ್ಯಾಭ್ಯಾಸ ಮಾತೃಭಾಷೆ ಯಾವುದಿದೆ ಮತ್ತು ಪರಿಸರದ ಭಾಷೆ ಯಾವುದಿದೆ, ಆ ಭಾಷೆಯಲ್ಲೇ ವಿದ್ಯಾಭ್ಯಾಸವನ್ನು ಕೊಡಬೇಕು ಎನ್ನತಕ್ಕಂಥಾದ್ದು ಬಹಳ ಪ್ರಮುಖವಾದಂಥ ತೀರ್ಪಾಗಿದೆ. ಇದರ ಬಗ್ಗೆ ಸರ್ಕಾರದ ನಿಲುವು ಏನು? ದಯವಿಟ್ಟು ಅದನ್ನು ಹೇಳಿ ಸ್ವಾಮಿ. ವಿದ್ಯಾಭ್ಯಾಸದ ಬಗ್ಗೆ ನೀವು ಹೇಳಿಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ : ಸ್ಪಷ್ಟವಾಗಿ ಉಚ್ಚನ್ಯಾಯಾಲಯದ ತೀರ್ಪು ಏನೆಂದು ಗೊತ್ತಿದ್ದೇ ನಾನು ಹೇಳಿದುದ್ದು ಏಕೆಂದರೆ ಆ ಪ್ರಶ್ನೆಯನ್ನು ಮಾನ್ಯ ವಾಟಾಳ್ ನಾಗರಾಜ್ ಅವರು ಎತ್ತಿದರು. ಉಚ್ಚನ್ಯಾಯಾಲಯದ ತೀರ್ಮಾನ ಇರುವುದು ಆಡಳಿತ ಭಾಷೆ ಅಲ್ಲ. ಅದು ಶಿಕ್ಷಣದ ಬಗ್ಗೆ ಇರುವುದೆಂದು ನನಗೆ ಗೊತ್ತಿದೆ. ಗೊತ್ತಿಲ್ಲದೆ ನಾನು ಉತ್ತರವನ್ನು ಹೇಳಿಲ್ಲ. ಶಿಕ್ಷಣದ ಬಗ್ಗೆಯೇ ನಾನು ಹೇಳಿದ್ದುದು. ಇದರ ಬಗ್ಗೆ ಮರುಸುತ್ತೋಲೆ ಕೊಡುವುದಕ್ಕೆ, ಯಾವರೀತಿ ಕೊಡಬೇಕು ಎಂದು ಗಮನದಲ್ಲಿಟ್ಟುಕೊಂಡು ಸಂಪೂರ್ಣವಾಗಿ ಉಚ್ಚನ್ಯಾಯಾಲಯ ಕೊಟ್ಟಂಥ ತೀರ್ಪನ್ನು ಅನುಷ್ಠಾನ ಆಗುವುದಕ್ಕೆ ಏನು ಆಗಬೇಕು ಎಂದು ಕಾನೂನು ಇಲಾಖೆ, ಆಡಳಿತ ಇಲಾಖೆ ಮತ್ತು ಶಿಕ್ಷಣ ಇಲಾಖೆ,ಅವರು ಈ ಬಗ್ಗೆ ಸಾಕಷ್ಟು ಸಮಲೋಚನೆಗಳನ್ನು ನಡೆಸಿದ್ದಾರೆ, ಸಾಕಷ್ಟು ಸಭೆಗಳನ್ನು ನಡೆಸಿದ್ದಾರೆ. ಈ ಬಗ್ಗೆ ಮರುಸುತ್ತೋಲೆಯನ್ನು ಸದ್ಯದಲ್ಲೇ ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಸಂಪೂರ್ಣವಾಗಿ ಜಾರಿಗೆತರಬೇಕೆಂದು ಹೇಳಿ ಸಾಹಿತಿಗಳು, ಬರಹಗಾರರು ಡಾ . ಚಿದಾನಂದಮೂರ್ತಿ ಅವರ ನೇತೃತ್ವದಲ್ಲಿ ಒಂದೇ ಸಮನೆ ಹದಿನೈದು ದಿವಸಗಳಿಂದ ಸತ್ಯಾಗ್ರಹಮಾಡಿದಂಥ ಪ್ರಸಂಗ ಸರ್ಕಾರಕ್ಕೂ ಗೊತ್ತಿದೆ. ನೀವು ಇದನ್ನು ಯಾವಾಗಿನಿಂದ ಜಾರಿಗೆ ತರುತ್ತೇವೆ ಎಂದು ಸ್ಪಷ್ಟಪಡಿಸಬೇಕಾದದ್ದು ನಿಮ್ಮ ಕರ್ತವ್ಯ. ಎರಡನೆಯ ದಾಗಿ ಅವರು ಹೇಳಿರತಕ್ಕಂಥಾದ್ದು, ಈಗ ಅನೇಕ ಐ.ಎ.ಎಸ್.ಅಧಿಕಾರಿಗಳು ಕನ್ನಡದಲ್ಲಿ ಬರೆಯುವುದನ್ನು ನಾವು ಕನ್ನಡಕದಲ್ಲಿ ನೋಡಬೇಕು ಎಂದು ಹೇಳಿದರು. ನೀವು ಯಾವ ಕನ್ನಡಕದಲ್ಲಾದರೂ ನೋಡಿ. ಕನ್ನಡಕದಲ್ಲಿ ನೋಡದಿದ್ದರೂ ಚಿಂತೆಯಿಲ್ಲ.